# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 83(128) |
| ಸದಸ್ಯರ ಹೆಸರು | ಶ್ರೀ ತಿಪ್ಪಣ್ಣಪ್ಪ ಕಮಕನೂರ(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 08.12.2025 |
| ಉತ್ತರಿಸಬೇಕಾದ ಸಚಿವರು | ಉನ್ನತ ಶಿಕ್ಷಣ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಲೋಕ ಸೇವಾ ಆಯೋಗವು 2017ರಲ್ಲಿ ಶಿಕ್ಷಣ ಇಲಾಖೆಯ ಗ್ರಂಥಾಲಯ ಸಹಾಯಕ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿ 2018ರಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ) | ಬಂದಿದ್ದಲ್ಲಿ, ಈ ನೇಮಕಾತಿ ಪ್ರಕ್ರಿಯೆಯಲ್ಲಿ 12 ಜನರು ಆಯ್ಕೆಯಾಗಿರುವ ಬಗ್ಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ಸಂಬಂಧಪಟ್ಟ ಉನ್ನತ ಶಿಕ್ಷಣ ಇಲಾಖೆಗೆ ಕಳುಹಿಸಿದ್ದರೂ ತಾಂತ್ರಿಕ ಕಾರಣಗಳಿಂದ ಇಲಾಖೆಯೂ ಈವರೆಗೂ ನೇಮಕಾತಿ ಆದೇಶವನ್ನು ವಿತರಿಸದಿರಲು ಕಾರಣಗಳೇನು: | ಕರ್ನಾಟಕ ಲೋಕ ಸೇವಾ ಆಯೋಗವು ಆಯ್ಕೆ ಪ್ರಕ್ರಿಯೆ ನಡೆಸಿ, ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 45 ಆರ್‌ಟಿ(4)ಬಿ/2016, ದಿನಾಂಕ:03.02.2022 ರಲ್ಲಿ ಒಟ್ಟು 12 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ಸದರಿ ಆಯ್ಕೆ ಪಟ್ಟಿಯನ್ನು ದಿನಾಂಕ:14.02.2022 ರಂದು ಸಲ್ಲಿಸಿದ್ದು, ಪ್ರತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.<br><br>ಸದರಿ ಪತ್ರದಲ್ಲಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವ ಮುನ್ನ ಅವರ ಅಂಕಪಟ್ಟಿ, ವಯಸ್ಸು, ವಿದ್ಯಾರ್ಹತೆ ಮತ್ತು ಕೋರಿರುವ ಮೀಸಲಾತಿಗಳ ಬಗ್ಗೆ ಮೂಲ ದಾಖಲೆಗಳ ನೈಜತೆಯನ್ನು ಪರಿಶೀಲಿಸಿದ ನಂತರವೇ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಹಾಗೂ ಮೀಸಲಾತಿ ಸೌಲಭ್ಯ ಪಡೆದು ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆದ ನಂತರವೇ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಆಯೋಗವು ತಿಳಿಸಿರುತ್ತದೆ.<br><br>ಇಲಾಖೆಯ ಗ್ರಂಥಾಲಯ ಸಹಾಯಕರ ಹುದ್ದೆಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯೊಂದಿಗೆ ಡಿಪ್ಲೋಮಾ ಇನ್ ಲೈಬ್ರರಿ ಸೈನ್ಸ್ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿರುತ್ತದೆ. ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ 12 ಅಭ್ಯರ್ಥಿಗಳಲ್ಲಿ 11 ಅಭ್ಯರ್ಥಿಗಳು ಹೊರ ರಾಜ್ಯದಿಂದ ಪಡೆದಿರುವ ಅಂಕಪಟ್ಟಿಗಳನ್ನು ಸಲ್ಲಿಸಿದ್ದು, ಒಬ್ಬ ಅಭ್ಯರ್ಥಿಯು ಮಾತ್ರ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು ಇಲ್ಲಿಂದ ಪಡೆದಿರುವ ಅಂಕಪಟ್ಟಿಗಳನ್ನು ಸಲ್ಲಿಸಿರುತ್ತಾರೆ. |
| ಇ) | ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಪಡೆಯುವಲ್ಲಿ ವಿಳಂಬವಾಗುತ್ತಿದ್ದು, ಈ ದೋಷಗಳನ್ನು ಸರಿಪಡಿಸಿ ಕೂಡಲೇ ನೇಮಕಾತಿ ಆದೇಶವನ್ನು ನೀಡಲು ಕ್ರಮ ಕೈಗೊಳ್ಳಲಾಗುವುದೇ? | |

| | | |
|---|---|---|
| | | ಅಭ್ಯರ್ಥಿಗಳು ಸಲ್ಲಿಸಿರುವ ವಿದ್ಯಾರ್ಹತೆಯ ಅಂಕಪಟ್ಟಿಗಳ ಬಗ್ಗೆ ಸಂಬಂಧಪಟ್ಟ ಹೊರ ರಾಜ್ಯದ ವಿಶ್ವವಿದ್ಯಾಲಯಗಳಿಂದ ನೈಜತೆ ವರದಿಯನ್ನು ಪಡೆಯಲಾಗಿದ್ದು, ಅವುಗಳಲ್ಲಿ 05 ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿಗಳು 'ನಕಲಿ' ಎಂಬುದಾಗಿ ವರದಿ ಸ್ವೀಕೃತವಾಗಿರುತ್ತದೆ. ಸದರಿ 05 ಅಭ್ಯರ್ಥಿಗಳು ನಕಲಿ ಅಂಕಪಟ್ಟಿಗಳನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 20ರಡಿ ದುರ್ನಡತೆಯನ್ನು ಎಸಗಿರುವುದರಿಂದ ದಿನಾಂಕ:25.06.2025 ರ ಆಯುಕ್ತರ ಆದೇಶ ಸಂಖ್ಯೆ: ಕಾಶಿಇ/ನೇವಿ-1/ಗ್ರಂಸಹು/192/2021-22 ರಲ್ಲಿ ಸದರಿಯವರುಗಳ ಅಭ್ಯರ್ಥಿತನವನ್ನು ರದ್ದುಪಡಿಸಲಾಗಿದೆ.<br><br>ಉಳಿದ 07 ಅಭ್ಯರ್ಥಿಗಳಲ್ಲಿ 02 ಅಭ್ಯರ್ಥಿಗಳು ಹೊರ ರಾಜ್ಯದ ವಿಶ್ವವಿದ್ಯಾಲಯಗಳಿಂದ ಪಡೆದು ಸಲ್ಲಿಸಿರುವ ಒಂದು ವರ್ಷದ ಡಿಪ್ಲೋಮಾ ವಿದ್ಯಾರ್ಹತೆಯು ರಾಜ್ಯದ ಮೂರು ವರ್ಷಗಳ ಡಿಪ್ಲೋಮಾ ವಿದ್ಯಾರ್ಹತೆಗೆ ಸಮನಾಂತರವಾಗುವುದಿಲ್ಲವೆಂದು ಸದರಿ ಅಭ್ಯರ್ಥಿಗಳಿಗೆ ನೇಮಕಾತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ ಎಂಬುದಾಗಿ ಹಿಂಬರಹ ನೀಡಲಾಗಿದೆ.<br><br>ಇನ್ನುಳಿದ ಅಭ್ಯರ್ಥಿಗಳ ಪೈಕಿ 02 ಅಭ್ಯರ್ಥಿಗಳಿಗೆ ಅಂಕಪಟ್ಟಿ ವಿತರಿಸಿರುವ ಹೊರ ರಾಜ್ಯದ ವಿಶ್ವವಿದ್ಯಾಲಯವನ್ನು ಯು.ಜಿ.ಸಿ. ವೆಬ್‌ಸೈಟ್‌ನಲ್ಲಿ ನಕಲಿ ವಿಶ್ವವಿದ್ಯಾಲಯ ಎಂಬುದಾಗಿ ಗುರುತಿಸಲಾಗಿದೆ. ಒಬ್ಬ ಅಭ್ಯರ್ಥಿಗೆ ಅಂಕಪಟ್ಟಿ ವಿತರಿಸಿರುವ ಹೊರ ರಾಜ್ಯದ ವಿಶ್ವವಿದ್ಯಾಲಯವು 2014 ರಿಂದ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಇನ್ನೊಬ್ಬ ಅಭ್ಯರ್ಥಿಗೆ ಅಂಕಪಟ್ಟಿ ವಿತರಿಸಿರುವ ಹೊರ ರಾಜ್ಯದ ವಿಶ್ವವಿದ್ಯಾಲಯದ ವಿಳಾಸವು ಪತ್ತೆಯಾಗಿರುವುದಿಲ್ಲ. ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಿಂದ ಗ್ರಂಥಾಲಯ ವಿಜ್ಞಾನ ವಿಷಯದಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ಒಬ್ಬ ಅಭ್ಯರ್ಥಿಯು ನೇಮಕಾತಿ ಹೊಂದಲು ಇಚ್ಛೆ ಇರುವುದಿಲ್ಲ ಎಂಬುದಾಗಿ ಮನವಿ ಸಲ್ಲಿಸಿರುತ್ತಾರೆ.<br><br>ಈ ಮೇಲಿನ ಅಂಶಗಳ/ತಾಂತ್ರಿಕ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಇಲಾಖೆಯ ಗ್ರಂಥಾಲಯ ಸಹಾಯಕರ (ಹೈ.ಕ. ವೃಂದ) ಹುದ್ದೆಗಳಿಗೆ ಆಯ್ಕೆಯಾಗಿರುವ 12 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿರುವುದಿಲ್ಲ. |

**ಇಡಿ 180 ಯುಇಸಿ 2025 (ಇ)**

**(ಡಾ: ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು

3705629
19/02/2022

ಕರ್ನಾಟಕ ಲೋಕಸೇವಾ ಆಯೋಗ

ದೂರವಾಣಿ : 22268390, ಫ್ಯಾಕ್ಸ್ : 22266481
ಅಂಚೆ ಪೆಟ್ಟಿಗೆ ನಂ : 5056
ಇ-ಮೇಲ್ : kpsc-ka@nic.in

ಕರ್ನಾಟಕ ಲೋಕಸೇವಾ ಆಯೋಗದ ಕಛೇರಿ,
" ಉದ್ಯೋಗ ಸೌಧ",
ಬೆಂಗಳೂರು-560 001.
ವೆಬ್ ಸೈಟ್ : http://kpsc.kar.nic.in

ಸಂಖ್ಯೆ : RU(1)548/21-22 ಪಿಎಸ್‌ಸಿ
ದಿನಾಂಕ : 14-02-2022
ಅಡಕ ಪತ್ರಗಳು :

ಇಂದ :

ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ
ಬೆಂಗಳೂರು.

ಇವರಿಗೆ :

**ಕಾಲೇಜು ಶಿಕ್ಷಣ ಆಯುಕ್ತರು,**
**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,**
**ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,**
**ಬೆಂಗಳೂರು – 560001.**

ಮಾನ್ಯರೆ,

**ವಿಷಯ:** ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಗ್ರಂಥಾಲಯ ಸಹಾಯಕರ 29 (ಹೈ.ಕ. ವೃಂದದ) ಹುದ್ದೆಗಳ ನೇಮಕಾತಿ ಬಗ್ಗೆ.

**ಉಲ್ಲೇಖ:**
1. ತಮ್ಮ ಪತ್ರ ಸಂಖ್ಯೆ: ಕಾಶಿಇ/75/ಇಎಪಿ/2015-16/ನೇಪಿ-1 ದಿ: 16.07.2015.
2. ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 01 ಆರ್‌ಟಿ(4)ಬಿ-4/2016, ದಿ:15.03.2017 ಮತ್ತು ಸೇರ್ಪಡೆ ಅಧಿಸೂಚನೆ ದಿನಾಂಕ:15-04-2017
3. ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 45 ಆರ್‌ಟಿ(4)ಬಿ/2016, ದಿ: 03.02.2022
4. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 56 ಸೇನೆನಿ 2020, ದಿ: 15.04.2020.

******

ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಗ್ರಂಥಾಲಯ ಸಹಾಯಕರ 29 (ಹೈ.ಕ.ವೃಂದದ) ಹುದ್ದೆಗಳನ್ನು ಭರ್ತಿ ಮಾಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿದ್ದು, ಈ ಸಂಬಂಧ ಉಲ್ಲೇಖ (2)ರ ಅಧಿಸೂಚನೆಯಲ್ಲಿ ಅಧಿಸೂಚಿಸಿ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು, 2006 ಮತ್ತು ಸದರಿ ನಿಯಮಕ್ಕೆ ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿಗಳು ಹಾಗೂ ತಿದ್ದುಪಡಿ ನಿಯಮಗಳು. 2015ರನ್ವಯ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಉಲ್ಲೇಖ (3)ರ ದಿನಾಂಕ: 03-02-2022ರ ಅಧಿಸೂಚನೆಯಲ್ಲಿ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ (ಪ್ರತಿ ಲಗತ್ತಿಸಿದೆ).

..2



File No. ED/180/UEC/2025-ED_SO_COLL-EDUCATION HIGHER SEC (Computer No. 1973313)

ಈ ಅಂತಿಮ ಆಯ್ಕೆಪಟ್ಟಿಯಲ್ಲಿ (ಹೈ.ಕ ವೃಂದದ) ಸಾ.ಅ/ಮಾ.ಸೈ ಅಭ್ಯರ್ಥಿಗಳಿಗಾಗಿ 01 ಹುದ್ದೆಯನ್ನು ಕಾಯ್ದಿರಿಸಲಾಗಿದ್ದು, ಈ ಗುಂಪಿನ ಮಾ.ಸೈ ಅಭ್ಯರ್ಥಿಗಳಾರು ಲಭ್ಯವಿಲ್ಲದ ಪ್ರಯುಕ್ತ ಈ ಹುದ್ದೆಯನ್ನು ಈ ಗುಂಪಿನ ಇತರೆ ಅಭ್ಯರ್ಥಿಯಿಂದ ಭರ್ತಿ ಮಾಡಲಾಗಿದೆ.

ಈ ಅಂತಿಮ ಆಯ್ಕೆಪಟ್ಟಿಯಲ್ಲಿ (ಹೈ.ಕ ವೃಂದದ) ಸಾ.ಅ/ಅಂ.ವಿ(ಅಂಧ/ದೃಮಾ) ಅಭ್ಯರ್ಥಿಗಳಿಗಾಗಿ 01 ಹುದ್ದೆಯನ್ನು ಕಾಯ್ದಿರಿಸಲಾಗಿದ್ದು, ಈ ಗುಂಪಿನ ಅಂ.ವಿ(ಅಂಧ/ದೃಮಾ) ಅಭ್ಯರ್ಥಿಗಳಾರು ಲಭ್ಯವಿಲ್ಲದ ಪ್ರಯುಕ್ತ ಈ ಹುದ್ದೆಯನ್ನು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 235 ಸೆನೆನಿ 2012, ದಿನಾಂಕ:22-11-2016ರಂತೆ ಭರ್ತಿ ಮಾಡಲಾಗಿಲ್ಲ.

ಈ ಅಂತಿಮ ಆಯ್ಕೆಪಟ್ಟಿಯಲ್ಲಿ (ಹೈ.ಕ ವೃಂದದ) ಸಾ.ಅ/ಮಹಿಳಾ ಅಭ್ಯರ್ಥಿಗಳಿಗಾಗಿ 05 ಹುದ್ದೆಗಳನ್ನು ಕಾಯ್ದಿರಿಸಲಾಗಿದ್ದು, ಈ ಗುಂಪಿನ ಇಬ್ಬರು ಮಹಿಳಾ ಅಭ್ಯರ್ಥಿಗಳು ಮಾತ್ರ ಲಭ್ಯವಿದ್ದು, ಇವರುಗಳನ್ನು ಭರ್ತಿಮಾಡಲಾಗಿದೆ. ಉಳಿದ 03 ಹುದ್ದೆಗಳನ್ನು ಗುಂಪಿನ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗಿದೆ.

ಈ ಅಂತಿಮ ಆಯ್ಕೆಪಟ್ಟಿಯಲ್ಲಿ (ಹೈ.ಕ ವೃಂದದ) ಸಾ.ಅ/ಗ್ರಾಮೀಣ ಅಭ್ಯರ್ಥಿಗಳಿಗಾಗಿ 04 ಹುದ್ದೆಗಳನ್ನು ಕಾಯ್ದಿರಿಸಲಾಗಿದ್ದು, ಈ ಗುಂಪಿನ 03 ಗ್ರಾಮೀಣ ಅಭ್ಯರ್ಥಿಗಳು ಮಾತ್ರ ಲಭ್ಯವಿದ್ದು, ಇವರುಗಳನ್ನು ಭರ್ತಿಮಾಡಲಾಗಿದೆ. ಉಳಿದ 01 ಹುದ್ದೆಗೆ ಯಾವುದೇ ಅಭ್ಯರ್ಥಿಗಳು ಲಭ್ಯವಿಲ್ಲದ ಪ್ರಯುಕ್ತ ಭರ್ತಿ ಮಾಡಲಾಗಿಲ್ಲ.

ಈ ಅಂತಿಮ ಆಯ್ಕೆಪಟ್ಟಿಯಲ್ಲಿ (ಹೈ.ಕ ವೃಂದದ) ಪ.ಜಾ[ಅಂ.ವಿ(ಅಂಧ/ದೃಮಾ)-01 ಮಹಿಳೆ-02, ಗ್ರಾಮೀಣ-01,ಇತರೆ-01] ಅಭ್ಯರ್ಥಿಗಳಿಗಾಗಿ ಒಟ್ಟು 05 ಹುದ್ದೆಗಳನ್ನು ಕಾಯ್ದಿರಿಸಲಾಗಿದ್ದು, ಈ ಗುಂಪಿನ ಯಾವುದೇ ಅಭ್ಯರ್ಥಿಗಳು ಲಭ್ಯವಿಲ್ಲದ ಪ್ರಯುಕ್ತ, ಈ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 235 ಸೆನೆನಿ 2012, ದಿನಾಂಕ:22-11-2016ರಂತೆ ಭರ್ತಿ ಮಾಡಲಾಗಿಲ್ಲ.

ಈ ಅಂತಿಮ ಆಯ್ಕೆಪಟ್ಟಿಯಲ್ಲಿ (ಹೈ.ಕ ವೃಂದದ) ಪ.ಪಂ/ಇತರೆ ಅಭ್ಯರ್ಥಿಗಳಿಗಾಗಿ 01 ಹುದ್ದೆಯನ್ನು ಕಾಯ್ದಿರಿಸಲಾಗಿದ್ದು, ಈ ಗುಂಪಿನ ಯಾವುದೇ ಅಭ್ಯರ್ಥಿಗಳು ಲಭ್ಯವಿಲ್ಲದ ಪ್ರಯುಕ್ತ ಈ ಹುದ್ದೆಯನ್ನು ಭರ್ತಿ ಮಾಡಲಾಗಿಲ್ಲ.

ಈ ಅಂತಿಮ ಆಯ್ಕೆಪಟ್ಟಿಯಲ್ಲಿ (ಹೈ.ಕ ವೃಂದದ) ಇತರೆ[ಪ್ರ,1-01, ಪ್ರ,2-(ಬಿ)-01, ಪ್ರ,3(ಎ)-01, ಪ್ರ,3(ಬಿ)-01] ಅಭ್ಯರ್ಥಿಗಳಿಗಾಗಿ ತಲಾ ಒಂದು ಹುದ್ದೆಯನ್ನು ಕಾಯ್ದಿರಿಸಲಾಗಿದ್ದು, ಆಯಾ ಗುಂಪಿನ ಯಾವುದೇ ಅಭ್ಯರ್ಥಿಗಳು ಲಭ್ಯವಿಲ್ಲದ ಪ್ರಯುಕ್ತ ಈ ಹುದ್ದೆಗಳನ್ನು ಭರ್ತಿ ಮಾಡಲಾಗಿಲ್ಲ.

..3

ಈ ಅಂತಿಮ ಆಯ್ಕೆಪಟ್ಟಿಯಲ್ಲಿ (ಹೈ.ಕ ವೃಂದದ) ಪ್ರ.2(ಎ)[ಅಂ.ವಿ(ಅಂಧ/ದೃ.ಮಾ)-01, ಮಹಿಳೆ-02, ಗ್ರಾಮೀಣ-01,ಇತರೆ-01] ಅಭ್ಯರ್ಥಿಗಳಿಗಾಗಿ ಒಟ್ಟು 05 ಹುದ್ದೆಗಳನ್ನು ಕಾಯ್ದಿರಿಸಲಾಗಿದ್ದು, ಈ ಗುಂಪಿನ ಯಾವುದೇ ಅಭ್ಯರ್ಥಿಗಳು ಲಭ್ಯವಿಲ್ಲದ ಪ್ರಯುಕ್ತ ಈ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 235 ಸೇನಿನಿ 2012, ದಿನಾಂಕ:22-11-2016ರಂತೆ ಭರ್ತಿ ಮಾಡಲಾಗಿಲ್ಲ.

ಈ ಅಂತಿಮ ಆಯ್ಕೆಪಟ್ಟಿಯಲ್ಲಿ ಮೀಸಲಾತಿ ಸೌಲಭ್ಯ ಪಡೆದು ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆದ ನಂತರವೇ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಕೋರಿದೆ. ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವ ಮುನ್ನ ಅವರ ಅಂಕಪಟ್ಟಿ, ವಯಸ್ಸು, ವಿದ್ಯಾರ್ಹತೆ, ಮತ್ತು ಕೋರಿರುವ ಮೀಸಲಾತಿಗಳ ಬಗ್ಗೆ ಮೂಲ ದಾಖಲೆಗಳ ನೈಜತೆಯನ್ನು ಪರಿಶೀಲಿಸಿದ ನಂತರವೇ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಕೋರಿದೆ. ಇದಲ್ಲದೆ, ಉಲ್ಲೇಖ (4)ರ ಆದೇಶದಂತೆ ಇ-ಸಿಂಧುತ್ವ ತಾಂತ್ರಿಕ ವ್ಯವಸ್ಥೆಯನ್ನು ಕಡ್ಡಾಯವಾಗಿ ಬಳಸಲು ಸೂಚಿಸಿದೆ

ಈ ಪತ್ರದೊಂದಿಗೆ ಕಳುಹಿಸಿಕೊಡಲಾದ ಅಭ್ಯರ್ಥಿಗಳ ಅರ್ಜಿ ಮತ್ತು ಅಡಕಗಳು ತಲುಪಿದ್ದಕ್ಕೆ, ಸ್ವೀಕೃತಿಯೊಂದನ್ನು ನೀಡುವಂತೆ ಮತ್ತು ನೇಮಕಾತಿ ಆದೇಶ ನೀಡಿ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾದ ನಂತರ ವಿವರವನ್ನು ನಮೂನೆ-07ರಲ್ಲಿ ಕಾಲಮಿತಿಯೊಳಗೆ ಅಂದರೆ 'ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು, 2006 ಮತ್ತು 2015ರ ತಿದ್ದುಪಡಿ ನಿಯಮಗಳ ನಿಯಮ 8(4) ರಲ್ಲಿ 'The Commission shall also simultaneously prepare an additional list of candidates not included in main list not more than fifty percent in respect of Technical posts and Ten percent in respect of non-technical posts which may be operated only once to the extent of unreported vacancies and the same shall be in force for a period off one and half years from the date of its publication' ಎಂದಿರುತ್ತದೆ. ಹೆಚ್ಚುವರಿ ಆಯ್ಕೆಪಟ್ಟಿಯನ್ನು ಆಯೋಗವು ಒಂದೂವರೆ ವರ್ಷಗಳ ಸೀಮಿತ ಕಾಲಾವಧಿಯಲ್ಲಿ ಪ್ರಕಟಿಸಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಕಡ್ಡಾಯವಾಗಿ, ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದ ಒಂದು ವರ್ಷದ ಒಳಗಾಗಿ ಹೆಚ್ಚುವರಿ ಆಯ್ಕೆಪಟ್ಟಿಗೆ ಬೇಡಿಕೆ ಕಳುಹಿಸಿ ಕೊಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,

(ಜಿ. ಸತ್ಯವತಿ)
ಕಾರ್ಯದರ್ಶಿ
ಕರ್ನಾಟಕ ಲೋಕ ಸೇವಾ ಆಯೋಗ.

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-01

ಸಂಖ್ಯೆ:ಪಿಎಸ್ ಸಿ 45 ಆರ್ ಟಿ(4)ಬಿ/2016 ದಿನಾಂಕ: 03-02- 2022

## ಅಧಿಸೂಚನೆ

## ಅಂತಿಮ ಆಯ್ಕೆಪಟ್ಟಿ

ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 01 ಆರ್ ಟಿ(4)ಬಿ-4/2016, ದಿನಾಂಕ: 15-03-2017 ಹಾಗೂ ಸೇರ್ಪಡೆ ಅಧಿಸೂಚನೆ ಪಿಎಸ್ ಸಿ 01 ಆರ್ ಟಿ(4)ಬಿ-1/2017, ದಿನಾಂಕ: 15-04-2017 ರಲ್ಲಿ ಅಧಿಸೂಚಿಸಲಾದ ಕಾಲೇಜು ಶಿಕ್ಷಣ ಇಲಾಖೆಯ ಗ್ರಂಥಾಲಯ ಸಹಾಯಕರು 29(ಹೈ.ಕ ವೃಂದ.) ಹುದ್ದೆಗಳಿಗೆ ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು 2006 ಹಾಗೂ 2015ರ ತಿದ್ದುಪಡಿ ನಿಯಮಗಳನ್ವಯ ದಿನಾಂಕ:12/10/2021 ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ಸದರಿ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿತ್ತು. ಸದರಿ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಆಯ್ಕೆಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ.

Name of the post : Library Assistant(Collegiate Education)
Name of the Department : Collegiate Education
Appointing Authority : Commissioner

### HYDERABAD KARNATAKA

| SL.NO. | NAME OF THE CANDIDATE | REGNO. | D_O_B<br>QUALIFICATION | RESVN. | MARKS | PERS. |
|---|---|---|---|---|---|---|
| 1 | REVANASIDDAPPA HOSAMANI<br>AT/M BOMMANAHALLI<br>M BOMMANAHALLI<br>SHORAPUR<br>YADAGIRI 585216 | 8639609 | 01/06/92<br>DIPLOMA(LIB.SCIENCE) | GM/SC/KMS | 43.0000 | 21.5000 |
| 2 | NAGANAGOUDA<br>NAGANAGOUDA B POLICE PATIL<br>AT GUDADANAL<br>LINGASUGUR<br>MEDINAPUR<br>RAICHUR 584115 | 8734310 | 10/02/83<br>DIPLOMA(LIB.SCIENCE) | GM/CAT1 | 37.5000 | 18.7500 |
| 3 | DEVENDRA<br>S/O BABU PEDDE<br>AT POST NARAYANPUR<br>BASAVAKALYAN<br>NARAYANPUR<br>BIDAR 585327 | 8709329 | 03/01/90<br>DIPLOMA(LIB.SCIENCE) | GM/3B | 33.7500 | 16.8750 |
| 4 | RAJANIAKANT<br>S/O BHASKAR<br>HOSUR POST RAMPUR<br>RAICHUR<br>POST RAMPUR<br>RAICHUR 584101 | 8733522 | 06/07/92<br>DIPLOMA(LIB.SCIENCE) | GM/SC | 33.7500 | 16.8750 |



File No. ED/180/UEC/2025-ED_SO_COLL-EDUCATION HIGHER SEC (Computer No. 1973313)

| SL.NO. | NAME OF THE CANDIDATE | REGNO. | D_O_B QUALIFICATION | RESVN. | MARKS | PERS. |
|---|---|---|---|---|---|---|
| 5 | SACHINKUMAR<br>S/O SIDRAM UMARGE<br>AT POST NARAYANPUR<br>BASAVAKALYAN<br>NARAYANPUR<br>BIDAR<br>585327 | 8720610 | 01/01/93<br>DIPLOMA(LIB.SCIENCE) | GM/3B/RL | 31.2500 | 15.6250 |
| 6 | ASHA NAMDEV MRS<br>MAIN ROAD<br>KANAJI<br>BHALKI<br>BIDAR<br>585413 | 8723413 | 01/12/90<br>DIPLOMA(LIB.SCIENCE) | GM/SC/W | 27.7500 | 13.8750 |
| 7 | DEVINDRAPPA<br>AT KYATNAL<br>NEAR GOVT SCOOL<br>SHAHAPUR<br>KADAMGERA B<br>YADAGIR<br>585319 | 8709112 | 10/05/90<br>DIPLOMA(LIB.SCIENCE) | GM/CAT1 | 19.0000 | 9.5000 |
| 8 | SUDHIR<br>AT MARGUTTI<br>MARGUTTI<br>KALABURAGI<br>585313 | 8743192 | 14/09/87<br>DIPLOMA(LIB.SCIENCE) | GM/SC/RL | 18.0000 | 9.0000 |
| 9 | MOHMMED PATEL<br>BHANDARI MOHALLA<br>POST YERAGERA<br>RAICHUR<br>YERAGERA<br>584133 | 8708263 | 01/06/88<br>DIPLOMA(LIB.SCIENCE) | GM/2B | 17.7500 | 8.8750 |
| 10 | HANUMANTA BALAGANUR<br>DR B.R. AMBEDKAR NAGAR<br>KOPPAL<br>TQ KOPPAL<br>DIST KOPPAL<br>583231 | 8451819 | 01/06/80<br>DIPLOMA(LIB.SCIENCE) | GM/SC | 16.2500 | 8.1250 |

| SL.NO. | NAME OF THE CANDIDATE | REGNO. | D_O_B<br>QUALIFICATION | RESVN. | MARKS | PERS. |
|---|---|---|---|---|---|---|
| 11 | KAVITA MALLANAGOUD MURAL<br>ATPOST RAJANAKOLLUR<br>RAJANAKOLLUR<br>SHORAPUR<br>YADAGIRI<br>585291 | 8739425 | 16/03/89<br>DIPLOMA(LIB.SCIENCE) | GM/W | 16.2500 | 8.1250 |
| 12 | SHARANAPPA BHIMSHA<br>NEAR GOVT HIGH SCHOOL<br>AT NANDOOR K<br>KALABURAGI<br>HIRENANDOOR<br>585228 | 8707008 | 01/03/93<br>DIPLOMA(LIB.SCIENCE) | GM/2A/RL | 2.7500 | 1.3750 |

ಆಯೋಗದ ಆದೇಶದ ಮೇರೆಗೆ

(ಡಿ. ಸತ್ಯವತಿ)

ಕಾರ್ಯದರ್ಶಿ

ಕರ್ನಾಟಕ ಲೋಕಸೇವಾ ಆಯೋಗ.